# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 231/2025**

**CW-1**

**PW-1**

ಸಾಕ್ಷಿಯ ಹೆಸರು : ಮಲ್ಲಿಕಾ

ಗಂಡನ ಹೆಸರು : ಜಯ

ಪ್ರಾಯ : 29 ವರ್ಷ

ಉದ್ಯೋಗ : ಗೃಹಿಣಿ

ವಾಸ : ಕೆರ್ವಾಶೆ ಗ್ರಾಮ,

ದಿನಾಂಕ : **27.02.2026** ರಂದು ಪಿಡಬ್ಲ್ಯೂ -1 /ಸಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ ಹಿರಿಯ ಸ.ಸ.ಅ. ರವರಿಂದ:

ಚಾಸಾ - 2 ನನ್ನ ಗಂಡ. ಚಾಸಾ - 3 ನನ್ನ ಮಾವ , ಚಾಸಾ - 4 ನನ್ನ ಅತ್ತೆ, ಚಾಸಾ - 5 ರವರು ನನ್ನ ಪಕ್ಕದ ಮನೆಯವರು. ಆರೋಪಿಯ ಪರಿಚಯವಿದೆ. ಆರೋಪಿ ನನಗೆ ಕೈಯಿಂದ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ,

ನನಗೆ ಜೀವ ಬೆದರಿಕೆ ಹಾಕಿರುವುದಿಲ್ಲ. ಹಾಗೂ ನನ್ನ ಮಾನಕ್ಕೆ ಕುಂದುಂಂಟಾಗುವಂತೆ ವರ್ತಿಸಿರುವುದಿಲ್ಲ. ನನಗೆ ದಾಖಲಾತಿಯನ್ನು ತೋರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ಒಪ್ಪಿಕೊಂಡ ಕಾರಣ, ಅದನ್ನು ನಿಪಿ - 1 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೆರಡು ದಾಖಲಾತಿಯನ್ನು ತೋರಿಸಲಾಗಿ, ಅವುಗಳಲ್ಲಿರುವ ಸಹಿ ನನ್ನದು ಎಂದು ಒಪ್ಪಿಕೊಂಡ ಕಾರಣ ಮಹಜರನ್ನು ನಿಪಿ - 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 2(ಎ) ಎಂದು, ನಕಾಶೆಯನ್ನು ನಿಪಿ - 3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 3(ಎ) ಎಂದು ಗುರುತಿಸಲಾಯಿತು. ನಿಪಿ - 1 ರಿಂದ ನಿಪಿ - 3 ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ. ಈಗ ನನಗೆ ಒಂದು ಫೋಟೋ ತೋರಿಸಿದ್ದು, ಅದರಲ್ಲಿ ನಾನು ಇರುವುದನ್ನು ಒಪ್ಪಿಕೊಂಡ ಕಾರಣ ನಿಪಿ - 4 ಎಂದು ಗುರುತಿಸಲಾಂತು. ನಿಪಿ - 4 ನ್ನು ನಮ್ಮ ಮನೆಯ ಬಳಿ ತೆಗೆದಿದ್ದು, ಯಾವ ಉದ್ದೇಶಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿಗಳು ಇದ್ದ ಕಾರಣ, ಸದರಿ ದಾಖಲಾತಿಯನ್ನು ನಿಪಿ - 5 ಎಂದು, ಅದರಲ್ಲಿರುವ ಸಹಿಗಳನ್ನು ನಿಪಿ - 5(ಎ) ಮತ್ತು ನಿಪಿ - 5(ಬಿ) ಎಂದದು ಗುರುತಿಸಲಾಯಿತು. ನಿಪಿ - 5 ಕ್ಕೆ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುವ ಕಾಲಕ್ಕೆ ಸಹಿ ಮಾಡಿರುತ್ತೇನೆ. ನಿಪಿ - 5 ರಲ್ಲಿರುವ

ವಿಷಯಗಳು ನಮ್ಮ ಮನೆಯವರ ಹೇಳಿಕೆಯ ಮೇರೆಗೆ ನೀಡಿದ್ದು, ಆ ರೀತಿಯ ಯಾವುದೇ ಘಟನೆಗಳು ಆಗಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಹಿರಿಯ ಸ.ಸ.ಅ. ರವರಿಂದಃ

ದಿಃ 15.04.2025 ರಂದು ಮಧ್ಯಾಹ್ನ 2 ಗಂಟೆಗೆ ನಾನು ಮನೆಯಲ್ಲಿದ್ದೆನು. ರಾತ್ರಿ 8.30 ರ ಸುಮಾರಿಗೆ ನಾನು ಮನೆಗೆ ಬಂದಾಗ ಆರೋಪಿಯು, ಚಾಸಾ - 3 ಮತ್ತು ಚಾಸಾ - 4 ರವರೊಂದಿಗೆ ಮನೆಯ ಜಗಲಿಯಲ್ಲಿ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ನೋಡಿದ ತಕ್ಷಣ ನನಗೆ ಕೊಡಬೇಕಾಗಿದ್ದ ಹಣವನ್ನು ಮರ್ಯಾದಿಯಾಗಿ ಕೊಡು , ಇಲ್ಲದಿದ್ದರೆ ನಿನನ್ನು ಬಿಡುವುದಿಲ್ಲ ಎಂದು ಹಾಗೂ ತಲೆ ಎತ್ತದಂತೆ ಮಾಡುತ್ತೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಸ್ವಲ್ಪ ಕಾಲಾವಕಾಶ ಕೇಳಿದ್ದು, ಆಗ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು, ತಲೆ ಕೂದಲು ಹಿಡಿದು ಕೈ ಹಾಕಿ ನನ್ನನ್ನು ದೂಡಿದ್ದಾರೆ ಎಂದರೆ ಸರಿಯಲ್ಲ. ಆಗ ಚಾಸಾ - 2 ರವರು ಬಂದಾಗ ಅವರನ್ನು ಸಹಾ ದೂಡಿ ಹಾಕಿ , ನನಗೆ ಕೈಯಿಂದ ಹಲ್ಲೆ ಮಾಡಿದ್ದು,

ಮೈಗೆ ಕೈ ಹಾಕಿ ಅಸಭ್ಯವಾಗಿ ವರ್ತಿಸಿದ್ದಾರೆ ಎಂದರೆ ಸರಿಯಲ್ಲ. ನಂತರ ನಾನು ಒಳಗಡೆ ಹೋಗಿದ್ದು, ಆತ ಪುನಃ ಮನೆ ಒಳಗಡೆ ಬರಲು ಪ್ರಯತ್ನಿಸಿರುವಾಗ ಚಾಸಾ - 2 ರವರು ಆತನನ್ನು ತಡೆದರು ಎಂದರೆ ಸರಿಯಲ್ಲ. ನಂತರ ಆರೋಪಿಯು ಅಲ್ಲಿಂದ ಹೋಗುತ್ತಿರುವಾಗ ಪುನಃ ಅವಾಚ್ಯ ಶಬ್ದಗಳಿಂದ ಬೈದು, ನೀನು ಮತ್ತು ನಿನ್ನ ಗಂಡ ಹೇಗೆ ಬದುಕುತ್ತೀರಿ ಎಂದು ನೋಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ನನಗೆ ಕಾರ್ಕಳ ಸರಕಾರಿ ಆಸ್ಪತ್ರೆಗೆ ಹೋಗಿ, ಅಲ್ಲಿ ಹೊರರೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಈ ಹಿಂದೆಯೂ ಕೂಡಾ ನನ್ನ ಜೊತೆ ಅಸಭ್ಯವಾಗಿ ವರ್ತಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾನು ದಿಃ 16.04.2025 ರಂದು ನಿಪಿ - 1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ17.04.2025 ರಂದು ನಾನು ತಕ್ಷೀರು ಸ್ಥಳ ತೋರಿಸಿದ ಮೇರೆಗೆ ಚಾಸಾ - 6 ಮತ್ತು 7 ರವರ ಸಮಕ್ಷಮ ನಿಪಿ - 2 ರಂತೆ ಮಧ್ಯಾಹ್ನ 2.30 ರಿಂದ 3 ಗಂಟೆಯ ಸಮಯದಲ್ಲಿ ಮಹಜರು ಮಾಡಿ, ನಿಪಿ - 3 ರಂತೆ ನಕಾಶೆಯನ್ನು ತಯಾರಿಸಿ, ನಿಪಿ - 4 ರಂತೆ ಫೋಟೋ ತೆಗೆದು, ನಿಪಿ - 2 ಮತ್ತು 3 ರಂತೆ ಓದಿ ಹೇಳಿ, ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿಃ 17.04.205 ರಂದು ನಾನು ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು , ಕಾರ್ಕಳ ಇವರ ಸಮಕ್ಷಮ ಹಾಜರಾಗಿ, ಘಟನೆಯ ಬಗ್ಗೆ ನಿಪಿ - 5 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆದರೆ

ನಮ್ಮ ಮನೆಯವರ ಮಾತಿನಂತೆ ಆ ರೀತಿ ಹೇಳಿಕೆ ನೀಡಿದ್ದೇನೆ. ಆರೋಪಿಯು ನಮ್ಮ ಸಂಬಂಧಿಕರಾದ ಕಾರಣ ಆತನೊಂದಿಗೆ ರಾಜಿ ಮಾಡಿಕೊಂಡು , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.